## ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.

### ಓ.ಎಸ್ಃ **04/2019**

ದಿನಾಂಕಃ 16.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್.ಎನ್.ಎನ್. ವಕೀಲರಿಂದಃ

ಪ್ರತಿವಾದಿಯರು ನನ್ನ ಹೆಂಡತಿಯ ಊರಾದ ವೀರನಹೊಸಹಳ್ಳಿ ಗ್ರಾಮದವರಾದ್ದರಿಂದ ಪರಿಚಯವಿರುತ್ತಾರೆ. ನನ್ನ ಹೆಂಡತಿಯ ತಂದೆಯ ಹೆಸರು ಚಂದ್ರೇಗೌಡ. ಪ್ರತಿವಾದಿಯರು ಸದರಿ ಚಂದ್ರೇಗೌಡನಿಗೆ ಆತ್ಮೀಯರು ಎನ್ನುವುದು ನಿಜ. ಹಣಕಾಸಿನ ವ್ಯವಹಾರವನ್ನು ಚಿರಪರಿಚಿತರೊಂದಿಗೆ ಮಾಡುತ್ತಾರೆ ಎನ್ನುವುದು ನಿಜ. ಪ್ರತಿವಾದಿಯರು ಚಂದ್ರೇಗೌಡನಿಗೆ ಚಿರಪರಿಚಿತನಾದ್ದರಿಂದ ಹಣಕಾಸಿನ ತೊಂದರೆ ಇದ್ದುದರಿಂದ ಸಾಲವನ್ನು ಕೊಡಿಸಲು ಕೇಳಿಕೊಂಡಿದ್ದರು ಎನ್ನುವುದಕ್ಕೆ ಸಾಕ್ಷಿಯು ಇರಬಹುದು ಆದರೆ, ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಚಂದ್ರೇಗೌಡ ನನ್ನ ಅಳಿಯ ಹಣಕಾಸಿನ ಲೇವಾದೇವಿ ಮಾಡುತ್ತಾರೆ ಅವರಿಂದ ಸಾಲ ಕೊಡಿಸುತ್ತೇನೆ ಎಂದು ಪ್ರತಿವಾದಿಗೆ ಹೇಳಿದ್ದರು ಎನ್ನುವುದು ಸುಳ್ಳು. ಸದರಿ ಚಂದ್ರೇಗೌಡನ ಮೂಲಕ ಪ್ರತಿವಾದಿಯರು ನನಗೆ ಪರಿಚಯವಾಗಿದ್ದರು ಎನ್ನುವುದು ಸರಿಯಲ್ಲ. ನಾನು ಪರಿಚಯ ಇಲ್ಲದವರೊಂದಿಗೆ ಹಣಕಾಸಿನ ವ್ಯವಹಾರವನ್ನು ಮಾಡುವುದಿಲ್ಲ. ಪ್ರತಿವಾದಿಯರು ನನಗೆ ಚಂದ್ರೇಗೌಡನ ಮೂಲಕ ಪರಿಚಯವಾಗಿದ್ದು, ಅವರ ಕೋರಿಕೆಯಂತೆ ನಾನು ಪ್ರತಿವಾದಿಯರಿಗೆ ಸಾಲ ಕೊಡಲು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಯರೊಂದಿಗೆ ನಾನು ಸಾಲದ ವ್ಯವಹಾರ ಮಾಡಿದ್ದೆ ಎಂದರೆ ಸರಿಯಲ್ಲ. ನನ್ನ ಹೆಂಡತಿ 1 ನೇ ವಾದಿಗೆ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಹೇಳಲು ಆಗುವುದಿಲ್ಲ ಎನ್ನುವುದಕ್ಕೆ ವೈದ್ಯಕೀಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಿ.ಪಿ. 01 ಜಿ.ಪಿ.ಎ ಅನ್ನು ಬಿ.ಎ. ಸುರೇಶ ಎಂಬ ನೋಟರಿಯವರಲ್ಲಿ ಮಾಡಿಸಿರುತ್ತದೆ. ಆ ಸಮಯದಲ್ಲಿ ನೋಟರಿಯವರ ರಿಜಿಸ್ಟರ್ ನಲ್ಲಿಯೂ ಸಹಿ ಮಾಡಿರುತ್ತೇನೆ. ನಿ.ಪಿ.1 ದಾಖಲೆಯಲ್ಲಿ ನೋಟರಿ ರಿಜಿಸ್ಟರ್ ಸಂಖ್ಯೆಯನ್ನು ಬರೆದಿಲ್ಲ ಎನ್ನುವುದು ನಿಜ.

ಈ ದಾವೆಯನ್ನು 1 ನೇ ಪ್ರತಿವಾದಿ ಮತ್ತು ಅವನ ಹೆಂಡತಿ ಮಕ್ಕಳ ವಿರುದ್ಧ ಹೂಡಿರುತ್ತದೆ. 1 ನೇ ಪ್ರತಿವಾದಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಎಂದು ದಾವೆಯಲ್ಲಿ ಬರೆದಿರುತ್ತದೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಾವೆಯ ಶಿರೋನಾಮೆಯಲ್ಲಿ 4 ನೇ ಪ್ರತಿವಾದಿಯ ಹೆಸರು ಅಖಿಲಾ ಸನ್ ಆಫ್ ಶಿವಣ್ಣ ಎಂದು ಬರೆದಿದೆ ಎಂದರೆ ಸರಿ. ಅದೇ ರೀತಿ ನೋಟಿಸ್ ನಲ್ಲಿಯೂ ಸಹ ಅಖಿಲಾ ಸನ್ ಆಫ್ ಶಿವಣ್ಣ ಎಂದು ಬರೆದಿದೆ ಎಂದರೆ ಸರಿ.

ಕರಾರು ಪತ್ರವನ್ನು ಬರೆಯುವ ದಿವಸ ಪ್ರತಿವಾದಿಯರು ಜಮೀನಿಗೆ ಸಂಬಂಧಪಟ್ಟ ಪಹಣಿಯನ್ನು ಕೊಟ್ಟಿದ್ದರು. ನಿ.ಪಿ. 15 ಮತ್ತು 16 ದಾಖಲೆಗಳನ್ನು ಬಿಟ್ಟು ಜಮೀನಿಗೆ ಸಂಬಂಧಪಟ್ಟಂತೆ ಬೇರೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎನ್ನುವುದು ನಿಜ. ಜಮೀನನ್ನು ಖರೀದಿಸುವ ಸಮಯದಲ್ಲಿ ಅದಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಪರಿಶೀಲಿಸಿದ್ದೇವು. ನ್ಯಾಯಾಲಯಕ್ಕೆ ನಾನು ಸದರಿ ಜಮೀನಿನ ಋಣಭಾರ ಪತ್ರವನ್ನು ಹಾಜರುಪಡಿಸಿಲ್ಲ ಜಮೀನನ್ನು ಖರೀದಿಸುವುದಕ್ಕಿಂತ ಮೊದಲು ಅಭಿಪ್ರಾಯ ಕೋರಿ ಯಾವುದೇ ನ್ಯಾಯವಾದಿಗಳ ಅಭಿಪ್ರಾಯವನ್ನು ಪಡೆದುಕೊಂಡಿರುವುದಿಲ್ಲ. ದಾವಾ ಆಸ್ತಿ ಜಮೀನಿನ ಒಟ್ಟು ವಿಸ್ತೀರ್ಣ ಒಟ್ಟು 3 ಎಕರೆ 12 ಗುಂಟೆ ಇರುತ್ತದೆ. ನಿ.ಪಿ. 16 ಆರ್.ಟಿ.ಸಿ ಯಲ್ಲಿ ಜಮೀನಿನ ವಿಸ್ತೀರ್ಣವನ್ನು ಸರಿಯಾಗಿ ನಮೂದಿಸಿಲ್ಲ ಎನ್ನುವುದು ನಿಜ.

ನಿ.ಪಿ. 3 ಕರಾರು ಪತ್ರವನ್ನು ಬಿಕ್ಕಲಂ ದಾರನಾದ ಹೆಚ್. ಆರ್. ಜಗದೀಶ ರವರ ಕಛೇರಿಯಲ್ಲಿ ಗಣಕೀಕೃತ ಮಾಡಲಾಗಿದೆ ಎನ್ನುವುದು ನಿಜ. ಸದರಿ ಕರಾರು ಪತ್ರಕ್ಕೆ ಪ್ರತಿವಾದಿ 1 ರಿಂದ 3 ಸಹಿ ಮಾಡಿರುತ್ತಾರೆ. ಸಾಕ್ಷಿದಾರರೆಂದು ವೆಂಕಟೇಶ ಮತ್ತು ಮಹದೇವ ಎನ್ನುವವರು ಸಹಿ ಮಾಡಿರುತ್ತಾರೆ. ಮೊದಲು ಮಹದೇವ ಸಹಿ ಮಾಡಿದ್ದು, ನಂತರ ವೆಂಕಟೇಶ ಸಹಿ ಮಾಡಿರುತ್ತಾರೆ. ಸದರಿ ವೆಂಕಟೇಶ ಮತ್ತು ಮಹದೇವ ಎನ್ನುವವರು ಪ್ರತಿ ದಿವಸ ನೋಂದಣಿ ಕಛೇರಿಯ ಹತ್ತಿರದಲ್ಲಿಯೇ ಸಹಿಗಳನ್ನು ಮಾಡುವ ವೃತ್ತಿಯನ್ನು ಮಾಡುತ್ತಾ ಇರುತ್ತಾರೆ ಎನ್ನುವುದು ಸರಿಯಲ್ಲ. ಕರಾರು ಪತ್ರದಲ್ಲಿ ಸದರಿ ಸಾಕ್ಷಿದಾರರ ತಂದೆಯ ಹೆಸರು ಮತ್ತು ಸಂಪೂರ್ಣ ವಿಳಾಸವನ್ನು ಅವರೇ ಬರೆದಿರುತ್ತಾರೆ. ಸದರಿಯವರು ಕರಾರು ಪತ್ರದಲ್ಲಿ ತಮ್ಮ ಹೆಸರು ಮತ್ತು ಸಂಪೂರ್ಣ ವಿಳಾಸವನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ. 3 ಕರಾರು ಪತ್ರವನ್ನು ಪ್ರತಿವಾದಿಯರಿಂದ ಸುಳ್ಳು ಹೇಳಿ

ಬರೆಸಿಕೊಂಡಿರುತ್ತೇವೆ ಎನ್ನುವುದು ಮತ್ತು ಪ್ರತಿವಾದಿಯರು ನಮಗೆ ಜಮೀನನ್ನು ಮಾರಾಟ ಮಾಡುತ್ತೇವೆ ಎಂದು ಒಪ್ಪಿ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಿ.ಪಿ. 03 ಕರಾರು ಪತ್ರದಲ್ಲಿ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು ಮೂರು ವರ್ಷದೊಳಗಾಗಿ ತಂದು ಕೊಡಬೇಕೆಂದು ಬರೆದಿದೆ ಎನ್ನುವುದು ನಿಜ. ನಮ್ಮ ಹತ್ತಿರ ಕರಾರಿನ ಉಳಿದ ಹಣವನ್ನು ಕೊಡುವುದಕ್ಕೆ ಹಣ ಇಲ್ಲದೇ ಇದ್ದುದರಿಂದ ಕರಾರು ಪತ್ರದಲ್ಲಿ ಮೂರು ವರ್ಷದ ಅವಧಿಯನ್ನು ಬರೆಸಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ಕರಾರು ಪತ್ರದಲ್ಲಿಯ ಒಕ್ಕಣೆಗಳನ್ನು ಪ್ರತಿವಾದಿಯರಿಗೆ ಬಿಕ್ಕಲಂ ದಾರ ಓದಿ ಹೇಳಿರಲಿಲ್ಲ ಎನ್ನುವುದು ಸರಿಯಲ್ಲ. ಕರಾರು ಪತ್ರದ ಪ್ರಕಾರ ಪ್ರತಿವಾದಿಯರಿಗೆ ಮುಂಗಡ ಹಣ ಕೊಟ್ಟಿದ್ದು ಜಮೀನಿನ ಸ್ವಾಧೀನವನ್ನು ಪಡೆದಿರಲಿಲ್ಲ. ಪ್ರತಿವಾದಿಯರಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸಾಕ್ಷಿದಾರರು, ನಾವು ಮತ್ತು ಬಿಕ್ಕಲಂ ಶಾಮೀಲಾಗಿ ಸುಳ್ಳು ಕರಾರು ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಈ ಸಮಯದಲ್ಲಿ ಶ್ರೀ ಎಸ್.ಎನ್.ಎನ್. ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.